ಅಧ್ಯಕ್ಷರು : ಅಲ್ಲಿಯವರೆಗೆ ನಿಲುವಳಿ ಸೂಚನೆಯನ್ನು ಸುಧಾರಿಸಿಕೊಳ್ಳಬೇಕಾಗುತ್ತದೆ. ನಾನು ಸಭೆ ಪ್ರಾರಂಭವಾಗಿದೆ ಎಂದು ಘೋಷಣೆ ಮಾಡುವವರೆಗೂ.....

ಶ್ರೀ ಕೆ.ಎಸ್. ಈಶ್ವರಪ್ಪ : ಐಎಎಸ್ ಅಧಿಕಾರಿಗಳನ್ನು ಚುನಾವಣಾ ಏಜಂಟರನ್ನಾಗಿ ಮಾಡಿಕೊಂಡಿದ್ದಾರೆ. ಅವರವರ ಲೋಕಸಭಾ ಕ್ಷೇತ್ರಕ್ಕೆ ಬೇಕಾದ ಅಧಿಕಾರಿಗಳನ್ನು ಹಾಕಿಕೊಂಡು ಅವರನ್ನು ಏಜೆಂಟರನ್ನಾಗಿ ಮಾಡಿಕೊಂಡಿದ್ದಾರೆ.

(ಗೊಂದಲ)

ಅಧ್ಯಕ್ಷರು : ಆರ್ಡರ್, ಆರ್ಡರ್, ಆರ್ಡರ್.

ಶ್ರೀ ವಾಟಾಳ್ ನಾಗರಾಜ್ : ಚುನಾವಣಾ ನಿಯಮಾವಳಿ ಪ್ರಕಾರ ನಿನ್ನೆ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ.

ಅಧ್ಯಕ್ಷರು : ವಾಟಾಳ್ ನಾಗರಾಜ್‌ರವರೇ, ಒಂದು ನಿಮಿಷ. ಮೊದಲು ಸಭೆಯ ಮುಂದೆ ಇರುವ ಕಾಗದಪತ್ರಗಳನ್ನು ತೆಗೆದುಕೊಳ್ಳೋಣ. ಈಗ ಗ್ರಾಮೀಣಾಭಿವೃದ್ಧಿ ಸಚಿವರು ತಮ್ಮ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಮಂಡಿಸಲಿ.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಧರ್ಮಸಿಂಗ್ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೇ, ಮಾನ್ಯ ಗ್ರಾಮೀಣಾಭಿವೃದ್ಧಿ ಸಚಿವರ ಹೆಸರಿನಲ್ಲಿರುವ ಈ ಕೆಳಕಂಡ ಕಾಗದ ಪತ್ರಗಳನ್ನು ಅವರ ಪರವಾಗಿ ನಾನು ಸಭೆಯ ಮುಂದಿಡುತ್ತೇನೆ.

Annual Report of the Karnataka Sheep and Sheep Products Development Board, Bangalore for the year 1989-90

as required under Section 26 of the Karnataka Sheep and Sheep Products Deveplopment Act, 1973.

ಶ್ರೀ ವಾಟಾಳ್ ನಾಗರಾಜ್: ಯಾವುವು ಎಂದು ತಾವು ಹೇಳುತ್ತೀರಾ?

ಅಧ್ಯಕ್ಷರು: ಈಗ ಶಿಕ್ಷಣ ಸಚಿವರು. ವಾಟಾಳ್ ನಾಗರಾಜ್‌ರವರೇ, ಇದು ಎಲ್ಲಾ ಸರ್ಕಾರಗಳಿಗೂ ಅನ್ವಯಿಸತಕ್ಕ ಸಮರ್ಥನೀಯವಾದ ಸೂತ್ರ. ಯಾವುದೇ ಸರ್ಕಾರ ಬರಲಿ ಕಳೆದ 44 ವರ್ಷಗಳಲ್ಲಿ ಯಾವ ಮಂತ್ರಿಗಳೂ ತಮ್ಮ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಇಟ್ಟಿದ್ದಾರೆ ಎನ್ನುವುದನ್ನು ಬೆಟ್ಟು ಮಾಡಿ ತೋರಿಸಿ, ಇದು ಇರತಕ್ಕದ್ದು ಇಲ್ಲ ಎಂದು ಹೇಳಲಿಕ್ಕೆ ಆಗುತ್ತದೆಯೇ? ಇದೆಲ್ಲಾ ಫಾರ್ಮಾಲಿಟೀಸ್.

ಶ್ರೀ ಧರ್ಮಸಿಂಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ಶಿಕ್ಷಣ ಸಚಿವರ ಹೆಸರಿನಲ್ಲಿರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

Annual Report of the Karnataka University for the year 1988-89.

as required under Section 45(2) of the Karnataka State Universities Act, 1976.

ಶ್ರೀ ಧರ್ಮಸಿಂಗ್ (ಗೃಹ ಸಚಿವರು): ಮಾನ್ಯ ಅಧ್ಯಕ್ಷರೇ, ನನ್ನ ಹೆಸರಿನ ಮುಂದಿರುವ ಕಾಗದ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

1. Notification No. HD 68 CNA 91 dated 14th March 1991 Condonation of delay for filing an application in form "AA" upto 5-8-1987 for the purpose of conversion of touring Cinema into semi-permanent by Sri J.K. Nagaraja Rao, Proprietor, Pramila Touring Talkies, Kaggalipura, Bangalore South Taluk.

2. Notification No. HD 69 CNA 91 dated 14th March 1991, Regarding filing an application in form "AA" upto 1-6-87 for the purpose of conversion of Touring Cinema into Semi-permanent by Sri JN Nagaraja, Proprietor, Sri Nagaraja Touring Talkies, Jangama Kote, Siddlaghatta, Taluk, Kolar District.

3. Order No. HD 264 CNA 89 dated 14th March 1991, Regarding Sereening of 15 mm Children films in the Auditorium of Jawahar Bal Bhavan, Mysore.

as required under Section 20 of the Karnataka Cinemas (Regulation) Act, 1964.

ಅಧ್ಯಕ್ಷರು : ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಯಿತು. ಈಗ ಅರ್ಜಿಗಳನ್ನು ಒಪ್ಪಿಸುವುದು.

ಅರ್ಜಿಗಳನ್ನೊಪ್ಪಿಸುವುದು

ಶ್ರೀ ಕೆ. ಪ್ರತಾಪಚಂದ್ರ ಶೆಟ್ಟಿ : ಮಾನ್ಯ ಅಧ್ಯಕ್ಷರೇ, ಕುಂದಾಪುರ ತಾಲ್ಲೂಕಿನ ಗಂಗೊಳ್ಳಿ ಮೀನುಗಾರಿಕಾ ಬಂದರಿನ ನಿರ್ಮಾಣದ ಬಗ್ಗೆ ಅರ್ಜಿಯನ್ನೊಪ್ಪಿಸುತ್ತೇನೆ.

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ಈ ಕೆಳಕಂಡ ಅರ್ಜಿಗಳನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ.

ಅ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯಲ್ಲಿ ನದಿಗೆ ತಡೆಗೋಡೆಯನ್ನು ಕಟ್ಟುವ ಬಗ್ಗೆ.

ಆ) ಕುಂದಾಪುರ ತಾಲ್ಲೂಕಿನ ಹೆಮ್ಮಾಡಿಯ ರಸ್ತೆಗಳ ಅಭಿವೃದ್ಧಿಯ ಬಗ್ಗೆ.

ಅಧ್ಯಕ್ಷರು : ಅರ್ಜಿಗಳನ್ನು ಒಪ್ಪಿಸಲಾಯಿತು.

ವರದಿಗಳನ್ನೊಪ್ಪಿಸುವುದು

ಶ್ರೀ ಜಿ.ಎಸ್. ಆಚಾರ್ : ಮಾನ್ಯ ಅಧ್ಯಕ್ಷರೇ, ವಿಧಾನಸಭೆಯ ಸರ್ಕಾರಿ ಭರವಸೆಗಳ ಸಮಿತಿಯ ಎರಡನೆಯ ಹಾಗೂ ಮೂರನೆಯ (9ನೇ ವಿಧಾನಸಭೆ) ವರದಿಗಳನ್ನು ಸಭೆಗೆ ಒಪ್ಪಿಸುತ್ತಿದ್ದೇನೆ.

ಅಧ್ಯಕ್ಷರು : ವರದಿಗಳನ್ನು ಒಪ್ಪಿಸಲಾಯಿತು. ಈಗ ನಿಯಮ 334ರ ಕೆಳಗೆ ಚರ್ಚೆ.

(ಗೊಂದಲ)

ಅಧ್ಯಕ್ಷರು : ಈಗ ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡಬಹುದು.

ಶ್ರೀ ಕೆ.ಎಸ್. ಈಶ್ವರಪ್ಪ : ನಾನು ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿದ್ದೇನೆ.

ಚುನಾವಣೆ ಸಮಯದಲ್ಲಿ ಅಧಿಕಾರಿಗಳ ವರ್ಗಾವರ್ಗಿ

+ ಶ್ರೀ ಡಿ.ಬಿ. ಚಂದ್ರೇಗೌಡ (ವಿರೋಧ ಪಕ್ಷದ [illegible] : ಮಾನ್ಯ ಅಧ್ಯಕ್ಷರೇ, ಈಗ ಹೆಚ್ಚೂ ಕಡಿಮೆ ಲೋಕಸಭೆ ಚುನಾವಣೆ ಅಪೋಷಿತವಾಗಿಯಾದರೂ ಘೋಷಣೆಯಾಗಿದೆ. ತಾರೀಖನ್ನು ನಿಗದಿ ಮಾಡಬೇಕು. ಚುನಾವಣಾ ಆಯೋಗದವರು ಸರಕಾರಗಳನ್ನು ನಡೆಸತಕ್ಕಂತಹ ವಿವಿಧ ರಾಜಕೀಯ ಪಕ್ಷಗಳಿಗೂ ಮತ್ತು ಸರಕಾರಗಳಿಗೂ ಒಂದು ಸುತ್ತೋಲೇಯನ್ನು ಕಳಿಸಿ 25ನೇ ತಾರೀಖು ಅಥವಾ ಅದು ಕಳೆದ ಮೇಲೇ ಯಾವ ವರ್ಗಾವರ್ಗಿಗಳನ್ನೂ ಮಾಡಬಾರದೆಂದು ನಿರ್ದೇಶನವನ್ನು ಕೊಟ್ಟಿದ್ದಾರೆ.